ಪಕ್ಷಿಲೋಕ



# ಸಂಘರ್ಷವೇ ಟಿಟ್ಟಿಭ ಜೀವನ

**ಟ್ರೇಕ್ ಟ್ರೇಕ್ ಎಂದು ವಯ್ಯಾರದಿಂದ ಓಡಾಡುತ್ತಾ, ಪಿಸುಮಾತನ್ನಾಡುತ್ತಾ ಮುದ್ದು ಮರಿಗಳೊಂದಿಗಿನ ಸುಖ ಸಂಸಾರದ ಕನಸನ್ನು ಹೆಣೆಯುತ್ತಿದ್ದ ಟಿಟ್ಟಿಭ ಜೋಡಿಯ ಈ ಕಥನ, ಮಾನವನ ಹೊಣೆಗೇಡಿತನಕ್ಕೂ ಕನ್ನಡಿ ಹಿಡಿದಿದೆ.**

**ಅಶೋಕ್ ಕುಮಾರ್**

ಅದೊಂದು ಮಟಮಟ ಮಧ್ಯಾಹ್ನ ನಮ್ಮೂರಿನ ಲೇಔಟ್‌ವೊಂದರಲ್ಲಿ ನಡೆಯುತ್ತಾ ಹೊರಟಿದ್ದೆ. ಇದ್ದಕ್ಕಿದ್ದಂತೆ ಪಕ್ಷಿಯೊಂದು ನನ್ನ ಸಮೀಪದಲ್ಲೇ 'ಟ್ರೇಕ್ ಟ್ರೇಕ್' ಎಂದು ಚೀರುತ್ತಾ ಸುಯ್ಯನೆ ಹಾರಿಹೋಯಿತು.

ದೂರದಲ್ಲಿ ಕಳ್ಳ ಹೆಜ್ಜೆ ಇಡುತ್ತಾ ಓಡುತ್ತಾ, ಆಗೊಮ್ಮೆ ಈಗೊಮ್ಮೆ ನನ್ನ ದಿಟ್ಟಿಸುತ್ತಾ ಪೊದೆಯ ಮರೆಯಲ್ಲಿ ಅವಿತುಕೊಂಡಿತು. ಕೆಲವು ನಿಮಿಷಗಳ ನಂತರ ಅಂತಹುದೇ ಇನ್ನೊಂದು ಪಕ್ಷಿ ಸಮತಟ್ಟಾದ ಜಾಗದಲ್ಲಿ ಕುಳಿತುಕೊಂಡಿತು. ಬಹುಶಃ ಅದು ಹೆಣ್ಣಿರಬಹುದೆಂದೂ, ನನ್ನ ಮೇಲೆ ಆಕ್ರಮಣ ಮಾಡಲು ಹೊರಟಿದ್ದು ಗಂಡು ಎಂದೂ ಊಹಿಸಿದೆ. ನನ್ನ ಊಹೆ ಸರಿಯಾಗಿತ್ತು. ನೆಲದಲ್ಲಿ ಕುಳಿತ ಟಿಟ್ಟಿಭ, ಮೊಟ್ಟೆಗೆ ಕಾವು ಕೊಡುತ್ತಿತ್ತು.

ಟಿಟ್ಟಿಭ ಪಕ್ಷಿ ಸಾಮಾನ್ಯವಾಗಿ ಮುಸ್ಸಂಜೆಯಲ್ಲಿ, ಕೆಲವು ಬಾರಿ ನಡುರಾತ್ರಿಯಲ್ಲೂ 'ಟಿಟ್ಟೀರಿ ಟ್ಟೀರಿ ಟಿಟ್ಟೀರಿ ಟ್ಟೀರಿ ಟ್ರೇಕ್ ಟ್ರೇಕ್' ಅಂತ ಕೂಗುತ್ತದೆ. ಪ್ರಪಂಚದಾದ್ಯಂತ ಟಿಟ್ಟಿಭಗಳಲ್ಲಿ ಸುಮಾರು 24 ಪ್ರಭೇದವಿದ್ದು, ಭಾರತದಲ್ಲಿ 7 ಪ್ರಭೇದಗಳು ಕಂಡುಬಂದಿವೆ.

ನೀಳಕಾಯ, ಹಳದಿ ಬಣ್ಣದ ಕೋಲು ಕಾಲು, ತಲೆಯಿಂದ ಎದೆಯವರೆಗೆ ಕಪ್ಪು ಬಣ್ಣ, ಕಣ್ಣಿಗೆ ಕೆಂಪು ಬಣ್ಣದ ಫ್ಯಾನ್ಸಿ ಕನ್ನಡಕ ಹಾಕಿಕೊಂಡ ಪಕ್ಕಾ ಖಳನಾಯಕನಂತೆ ತೋರುವ ಕೆಂಪು ಟಿಟ್ಟಿಭ, ದಕ್ಷಿಣ ಕನ್ನಡ, ಕರಾವಳಿ ಪ್ರದೇಶದಲ್ಲಿ ಕಾಣಸಿಗುತ್ತದೆ. ಹಳದಿ ಟಿಟ್ಟಿಭ ರಾಜ್ಯದ ಮಲೆನಾಡು ಹಾಗೂ ಬಯಲುಸೀಮೆಯಲ್ಲಿ ಕಂಡುಬರುತ್ತದೆ. ಇಂಗ್ಲಿಷ್‌ನಲ್ಲಿ ಕೆಂಪು ಟಿಟ್ಟಿಭವನ್ನು **Red wattled lapwing**, ಹಳದಿ ಟಿಟ್ಟಿಭವನ್ನು **Yellow wattled lapwing** ಎನ್ನುತ್ತಾರೆ.

ಮಾರ್ಚ್‌ನಿಂದ ಆಗಸ್ಟ್ ಇವುಗಳ ಸಂತಾನೋತ್ಪತ್ತಿ ಕಾಲ. ಟಿಟ್ಟಿಭ ಇತರೆ ಪಕ್ಷಿಗಳಂತೆ ಹುಲ್ಲು–ಕಡ್ಡಿ ನೇಯ್ದು ಮರದ ಕೊಂಬೆಗಳಲ್ಲಿ ಗೂಡು ಕಟ್ಟುವುದಿಲ್ಲ. ಬಯಲು ಜಾಗದಲ್ಲಿ ಹರಳುಕಲ್ಲುಗಳ ಜೊತೆ, ಒಣ ಸೆಗಣಿ ತುಂಡು ಅಥವಾ ಕಡ್ಡಿ ತುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿ, ಅದರ ನಡುವೆ ಮೂರರಿಂದ ನಾಲ್ಕು ಮೊಟ್ಟೆಗಳನ್ನಿಟ್ಟು, 28 ದಿನಗಳ ಕಾಲ ಮಳೆಬಿಸಿಲನ್ನೂ ಲೆಕ್ಕಿಸದೆ ಕಾವು ನೀಡುತ್ತವೆ. ಮಸುಕಾದ ಹಸುರು ಮತ್ತು ಕಂದು ಮಿಶ್ರಿತ ಬಣ್ಣದಲ್ಲಿರುವ ಮೊಟ್ಟೆಯ ಮೇಲ್ಮೈನಲ್ಲಿ ಕಪ್ಪು ಚುಕ್ಕಿಗಳಿದ್ದು, ಸುತ್ತಮುತ್ತಲಿನ ಕಲ್ಲು ಕಡ್ಡಿಯ ಬಣ್ಣಕ್ಕೆ ಸಂಪೂರ್ಣ ಹೊಂದಿಕೊಂಡು ಗೋಚರಿಸದಂತಿರುತ್ತವೆ. ಒಮ್ಮೆ ಮೊಟ್ಟೆಯ ಮೇಲಿನಿಂದ ದೃಷ್ಟಿ ಸರಿಸಿದೆವೆಂದರೆ ಪುನಃ ಅವನ್ನು ಕಂಡುಹಿಡಿಯುವುದು ಕಷ್ಟ.



ಹುಳು ಹುಪ್ಪಟೆಗಾಗಿ ಹುಡುಕಾಟ

ಕಾವು ನೀಡುತ್ತಾ ತನ್ನ ಸುತ್ತಲಿನ ಪ್ರದೇಶವನ್ನು ಸೂಕ್ಷ್ಮವಾಗಿ ಗಮನಿಸಲು, ಸುರಕ್ಷತೆ ದೃಷ್ಟಿಯಿಂದ ಟಿಟ್ಟಿಭ ಬಯಲು ಪ್ರದೇಶವನ್ನೇ ಬಯಸುತ್ತವೆ. ಕಟ್ಟಡದ ಛಾವಣಿ ಮತ್ತು ರೈಲು ಹಳಿಗಳ ನಡುವಿನ ಜಲ್ಲಿಕಲ್ಲುಗಳ ಮಧ್ಯಭಾಗದಲ್ಲೂ ಮೊಟ್ಟೆಯಿರಿಸಿ ಮರಿ ಮಾಡಿರುವ ಉದಾರಹಣೆಗಳಿವೆ. ಹಿಂದೊಮ್ಮೆ ಇದೇ ರೀತಿ ಮೈದಾನದಲ್ಲಿರಿಸಿದ ಮೊಟ್ಟೆಗಳನ್ನು ನೋಡಿ, 'ಅಯ್ಯೋ ಪಾಪ ನಾಯಿ–ಬೆಕ್ಕುಗಳು ತಿಂದುಬಿಟ್ಟಾವು' ಎಂದುಕೊಂಡು ಮೊಟ್ಟೆಯ ಸುತ್ತ ಇಟ್ಟಿಗೆಗಳನ್ನಿಟ್ಟು ಕಾಪಾಡುವ ವ್ಯರ್ಥ ಪ್ರಯತ್ನವನ್ನೂ ಮಾಡಿದ್ದೆ. ಇಟ್ಟಿಗೆ ಇದ್ದಷ್ಟು ಸಮಯ ಟಿಟ್ಟಿಭ, ಮೊಟ್ಟೆಯ ಅಕ್ಕಪಕ್ಕವೂ ಸುಳಿಯಲಿಲ್ಲ! ಬಹಳ ಸೂಕ್ಷ್ಮ ಹಾಗೂ ಸಂಶಯ ಪ್ರವೃತ್ತಿಯ ಪಕ್ಷಿಗಳಿವು. ಹಿಂದೆ ನಡೆದ ಆ ಸನ್ನಿವೇಶವನ್ನು ಮೆಲುಕು ಹಾಕುತ್ತಾ ಗೂಡಿನಿಂದ ಸುಮಾರು 30 ಅಡಿಗಳಷ್ಟು ದೂರದಲ್ಲಿದ್ದು, ಫೋಟೊ ಕ್ಲಿಕ್ಕಿಸಲು